-     -                                          ಸಿ.ಸಿ. ನಂ. 348/2024

**ಪಿ. ಡಬ್ಲ್ಯೂ: 1**

**( ಇಂದು ದಿಃ 13/02/2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.)**

**ಪಾಟೀ ಸವಾಲು : ಆರೋಪಿ ಪರ ಶ್ರೀ ಎಮ್ ಟಿ ಎನ್ ವಕೀಲರಿಂದ,**

ನಾನು ಪಿರ್ಯಾದಿ ಸಂಸ್ಥೆಯಲ್ಲಿ ಕಳೆದ 06 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದೇನೆ. ಆರೋಪಿಯು ಪಿರ್ಯಾದಿ ಸಂಸ್ಥೆಯಲ್ಲಿ ಸಾಲ ಪಡೆಯುವಾಗ ನಾನು ಮ್ಯಾನೇಜರ್ ಆಗಿರಲ್ಲಿಲ್ಲ ದೂರನ್ನು ದಾಖಲಿಸುವಾಗ ಹಿಂದಿನ ಮ್ಯಾನೇಜರ ಮಾಹಿತಿ ನೀಡಿದ್ದಾರೆ. ಏನು ದೂರು ನೀಡಿದ್ದಾರೆಂದು ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನಮ್ಮ ಮುಖ್ಯ ಕಚೇರಿ ಕಾರವಾರದಲ್ಲಿ ಇದೆ. ಅದರಲ್ಲಿ ನಿರ್ದೇಶಕರ ಮಂಡಳಿ ಇದೆ. ಸದರಿ ನಿರ್ದೇಶಕರ ಮಂಡಳಿಯವರು ನನಗೆ ಅಧಿಕಾರ ಪತ್ರವನ್ನು ನೀಡಿಲ್ಲ ಎಂದರೆ ಸರಿಯಲ್ಲ. ಅಧಿಕಾರ ಪತ್ರವನ್ನು ಮ್ಯಾನೇಜಿಂಗ್ ಡೈರೆಕ್ಟರ್ ರವರು ನೀಡಿದ್ದಾರೆ. ನಮ್ಮ ಸಂಸ್ಥೆಯಲ್ಲಿ ಅಧ್ಯಕ್ಷರೇ ಮ್ಯಾನೇಜಿಂಗ ಡೈರೆಕ್ಟರ್ ಆಗಿದ್ದಾರೆ. ನಮ್ಮ ಸಂಸ್ಥೆ ಕಾನೂನಡಿ ನೊಂದಣಿ ಆಗಿದೆ. ಆರೋಪಿತಳು ಸದರಿ ಪ್ರಕರಣದಲ್ಲಿ ಜಾಮೀನುದಾರರಾಗಿದ್ದಾರೆ . ಆರೋಪಿಯ ಗಂಡನಿಗೆ ಸಾಲ ನೀಡಿರುತ್ತೇವೆ. ಆರೋಪಿತಳ ಹೆಸರಿನಲ್ಲಿ ನಾವು ಸಾಲ ನೀಡಿಲ್ಲ. ಆರೋಪಿಯ ಗಂಡನಿಗೆ ವ್ಯವಹಾರ ಸಾಲ ನೀಡಿರುತ್ತೇವೆ. ಸಾಲ ಕಟ್ಟು ಬಾಕಿ ಆದಾಗ ಆರೋಪಿಯ ಗಂಡನ ವಿರುದ್ಧ ಕ್ರಮ ಕೈಗೊಂಡಿರುತ್ತೇವೆ. ಸಾಲ ಕಟ್ಟು ಬಾಕಿ ಆದಾಗ ಆರೋಪಿತಳು ಚೆಕ್ಕನ್ನು ಅವರ ಮನೆಯಲ್ಲಿ ನಮಗೆ ನೀಡಿರುತ್ತಾರೆ. ಚೆಕ್ಕಿನ ಮೇಲೆ ಇರುವ ಬರವಣಿಗೆಗಳು ಇಂಗ್ಲೀಷ ನಲ್ಲಿ ಇವೆ ಹಾಗೂ ಸಹಿಯು ಕನ್ನಡದಲ್ಲಿ ಇದೆ ಎಂದರೆ ಸರಿಯಲ್ಲ. ಚೆಕ್ಕು ನೀಡಿದ ಬಗ್ಗೆ ದಾಖಲೆಗಳು ಇವೆ. ಚೆಕ್ಕನ್ನು ಅದೇ ದಿನ ನೀಡಿದ್ದಾರೆಂದು ತೋರಿಸಲು ದಾಖಲೆಗಳು ಇವೆ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಆದರೆ ಹಾಜರುಪಡಿಸಬಹುದು. ಸಾಲಗಾರನಿಗೆ ಸಾಲ ನೀಡುವಾಗ ರೂ. 5,500 ಎಫ್ ಡಿ ಹಾಗೂ ರೂ. 2800 ಷೇರಿನ ಮೊತ್ತ ನಮ್ಮ ಬಳಿ ಇದೆ. ಸಾಲಕ್ಕೆ ಸಂಬಂಧಿಸಿ ಸಾಲಗಾರನು ಒಂದು ಕಂತನ್ನು ತುಂಬಿಲ್ಲ . ನಮ್ಮ ಸಂಸ್ಥೆಯಲ್ಲಿ ಸಾಲದ ಖಾತೆಯ ಮ್ಯಾನ್ಯುವಲ್ ರಜಿಸ್ಟರ ಇದೆ . ಸಾಲಗಾರನ್ನು ಸಂಪೂರ್ಣ ಸಾಲವನ್ನು ಚುಕ್ತಾ ಮಾಡಿದ್ದಾರೆ ಎಂದರೆ ಸರಿಯಲ್ಲ. ಯಾವುದೇ ಸಾಲ ಮರುಪಾವತಿ ಮಾಡಲು ಬಾಕಿ ಇರಲಿಲ್ಲ ಎಂದರೆ ಸರಿಯಲ್ಲ. ಎಫ್ ಡಿ ಮೆತ್ತ ವಾಪಸ್ಸು ನೀಡಿ ಎಂದು ಅನೇಕ ಬಾರಿ ಸಾಲಗಾರರು ಹಾಗೂ ಆರೋಪಿತರು ನಮ್ಮ ಬಳಿ ಬಂದಿದ್ದರು ಎಂದರೆ ಸರಿಯಲ್ಲ. ಪದೇ ಪದೇ ಬಂದು ಕೇಳಿದ ಕಾರಣ ಸಿಟ್ಟಿನಿಂದ ಆರೋಪಿ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಆರೋಪಿ ನಮ್ಮ ಸಂಸ್ಥೆಯಲ್ಲಿ ಪಡೆದ ಸಾಲಕ್ಕೆ ಭದ್ರತೆಗಾಗಿ ನೀಡಿದ ಚೆಕ್ಕನ್ನು ದುರುಪಯೋಗಪಡಿಸಿ ಆತನ ವಿರುದ್ಧ ಸುಳ್ಳು ಪ್ರಕರಣ

ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಹಾಜರುಪಡಿಸಿದ ಎಲ್ಲಾ ದಾಖಲೆಗಳು ನಮ್ಮ ಸೃಷ್ಟಿಯಾಗಿದೆ ಎಂದರೆ ಸರಿಯಲ್ಲ. ನನಗೆ ನಿರ್ದೇಶಕರ ಮಂಡಳಿ ನನಗೆ ಅಧಿಕಾರ ಸದರಿ ಪ್ರಕರಣ ನಡೆಸಲು ನೀಡಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ**

**ಸಹಿ ಇದೆ**

**ಪ್ರ.ದ.ನ್ಯಾ.ದಂ., ಭಟ್ಕಳ**